ಸ್ಥಾಪಿಸಲು ಅನುಮತಿಗಾಗಿ ಭಾರತ ಸರ್ಕಾರಕ್ಕೆ ಅಗತ್ಯ ಅರ್ಜಿಯನ್ನು ಸಲ್ಲಿಸಲಾಗಿದೆ. ಮೇಲ್ಕಂಡ ಸ್ಥಳಗಳಲ್ಲಿನ ಜಿಲ್ಲಾ ಆಸ್ಪತ್ರೆಗಳನ್ನು ಭಾರತೀಯ ವೈದ್ಯಕೀಯ ಪರಿಷತ್ತಿನ ಅಗತ್ಯಗಳಿಗನುಗುಣವಾಗಿ ಬೋಧನಾ ಆಸ್ಪತೆಗಳನ್ನಾಗಿ ಮೇಲ್ದರ್ಜೆಗೇರಿಸಿ ಪರಿವರ್ತಿಸಲಾಗಿದೆ. ಶಿವಮೊಗ್ಗ ಸರ್ಕಾರಿ ವೈದ್ಯಕೀಯ ಕಾಲೇಜಿನ ಸ್ಥಾಪನೆಗೆ ಅನುಮತಿ ಕೋರಿ ಕೇಂದ್ರ ಸರ್ಕಾರಕ್ಕೆ ಅರ್ಜಿ ಸಲ್ಲಿಸುವುದರಲ್ಲಿ ಸ್ವಲ್ಪ ವಿಳಂಬವಾಗಿತ್ತು. ಕೇಂದ್ರಸರ್ಕಾರವು ಸದರಿ ಅರ್ಜಿಯನ್ನು ಹಿಂತಿರುಗಿಸಿ ಮುಂದಿನ 2006–07 ನೇ ಶೈಕ್ಷಣಿಕ ಸಾಲಿಗೆ ನವ್ಯವಾಗಿ ಅರ್ಜಿಯನ್ನು ಸಲ್ಲಿಸುವಂತೆ ಸೂಚಿಸಿದೆ. ವೈದ್ಯಕೀಯ ಪರಿಷತ್ತಿನ ಪರಿವೀಕ್ಷಣಾ ತಂಡವು ಸದರಿ ಕಾಲೇಜುಗಳ ಪರಿಶೀಲನೆ ನಡೆಸಿದೆ. ಭಾರತೀಯ ವೈದ್ಯಕೀಯ ಮಂಡಳಿಯು ಮೂಲಭೂತ ಸೌಲಭ್ಯಗಳ ಮತ್ತು ಸಿಬ್ಬಂದಿ ಕೊರತೆಯನ್ನು ಗುರುತಿಸಿ ಅನುಮೋದಿಸದಿರುವಂತೆ ಶಿಫಾರಸ್ಸು ಮಾಡಿದೆ. ಆದಾಗ್ಯೂ, ಭಾರತ ಸರ್ಕಾರವು ದಿಃ 20.06.2005 ರ ತನ್ನ ಪತ್ರದಲ್ಲಿ ಪರಿವೀಕ್ಷಣಾ ವರದಿಯಲ್ಲಿನ ಅಂಶಗಳಿಗೆ ಸಂಬಂಧಿಸಿದಂತೆ ಲಿಖಿತ ಪ್ರತಿಕ್ರಿಯೆ ವ್ಯಕ್ತಪಡಿಸಿ ತ್ವರಿತವಾಗಿ ವಿಷಯವನ್ನು ಪರಿಶೀಲಿಸಲು .ಕೇಳಿದೆ. ಭಾರತೀಯ ವೈದ್ಯಕೀಯ ಪರಿಷತ್ ಗುರುತಿಸಿರುವ ಕೊರತೆಗಳನ್ನು ಸಂಬಂಧಿಸಿದ ಪ್ರಾಧಿಕಾರಗಳು ಕೈಗೆತ್ತಿಕೊಂಡಿದ್ದು ಈ ಸಂಬಂಧ ಭಾರತ ಸರ್ಕಾರಕ್ಕೆ ಹಾಸನ, ಮಂಡ್ಯ ಹಾಗೂ ಬೆಳಗಾಂ ವೈದ್ಯಕೀಯ ಕಾಲೇಜುಗಳಿಗೆ ಸಂಬಂಧಿಸಿದಂತೆ ಲಿಖಿತ ಪ್ರತಿಕ್ರಿಯೆಯನ್ನು ತಾರೀಖಿಃ 06.07.2005 ರಂದು ಕಳುಹಿಸಲಾಗಿದೆ. ಈಗಾಗಲೇ ಕಾಲೇಜಿನ ಸ್ಥಾಪನೆಗೆ ಪೂರಕವಾದ 25 ಎಕರೆ ಭೂಮಿಯನ್ನು ಸಂಗ್ರಹಿಸಿಕೊಂಡು ಕಾಲೇಜಿನ ಕಟ್ಟಡದ ನಕ್ಷೆಯನ್ನು ತಯಾರಿಸಿ ನಿರ್ಮಾಣದ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಕಾರ್ಯಾದೇಶವನ್ನು ಸಂಬಂಧಿಸಿದ ಗುತ್ತಿಗೆದಾರರಿಗೆ ನೀಡಲಾಗಿದೆ.

ಈ) ಕಾಲೇಜು ಕಟ್ಟಡಗಳ ನಿರ್ಮಾಣ ಪ್ರಗತಿಯಲ್ಲಿದೆ 2005–06ನೇ ಸಾಲಿನ ಆಯವ್ಯಯದಲ್ಲಿ 30 ಕೋಟಿ ರೂಪಾಯಿಗಳನ್ನು ಕಾಮಗಾರಿಗಳಿಗಾಗಿ ಮತ್ತು 6.95 ಕೋಟಿ ರೂಪಾಯಿಗಳನ್ನು ವೈದ್ಯಕೀಯ ಉಪಕರಣಗಳ ಸಂಗ್ರಹಣೆಗಾಗಿ ವಿತರಿಸಲಾಗಿದೆ

5040 (5965) ಶ್ರೀ ಮಲ್ಲಿಕಾರ್ಜುನ್ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ):– ಮಾನ್ಯ ಉನ್ನತ ಶಿಕ್ಷಣ ಸಚಿವರು. ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಬೀದರ್ ಜಿಲ್ಲೆಯಲ್ಲಿ ಶಿಕ್ಷಣ ನೀಡುತ್ತಿರುವ ಸರ್ಕಾರದ ವಿವಿಧ ಕಾಲೇಜುಗಳ ಸಂಖ್ಯೆ ಎಷ್ಟು: (ತಾಲ್ಲೂಕುವಾರು ವಿವರ ನೀಡುವುದು)

ಆ) ಈ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಮೂಲಭೂತ ಸೌಕರ್ಯಗಳನ್ನು ಒದಗಿಸಿ ಕೊಡಲಾಗಿದೆಯೇ:

ಇ) ಇಲ್ಲವಾದಲ್ಲಿ ಕಾರಣಗಳೇನು:

ಈ) ಸ್ವಂತ ಕಟ್ಟಡ ಹೊಂದಿರುವ ಕಾಲೇಜುಗಳ ವಿವರ ನೀಡುವುದು

ಉ) ಈ ಕಾಲೇಜುಗಳಲ್ಲಿ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ಹುದ್ದೆಗಳು ಎಷ್ಟು ಖಾಲಿ ಇವೆ, ಅವುಗಳನ್ನು ಯಾವಾಗ ತುಂಬಲಾಗುವುದು?

ಶ್ರೀ ಡಿ. ಮಂಜುನಾಥ ಉನ್ನತ ಶಿಕ್ಷಣ ಸಚಿವರು.

ಅ) ಬೀದರ್ ಜಿಲ್ಲೆಯ ಬೀದರ್‌ನಲ್ಲಿ ಒಂದು ಸರ್ಕಾರಿ ಪದವಿ ಕಾಲೇಜು ಕಾರ್ಯನಿರ್ವಹಿಸುತ್ತಿದೆ.

ಆ) ಹೌದು

ಇ) ಉದ್ಭವಿಸುವುದಿಲ್ಲ

ಈ) ಬೀದರ್ ಜಿಲ್ಲೆಯ ಬೀದರ್‌ನಲ್ಲಿರುವ ಏಕಮಾತ್ರ ಸರ್ಕಾರಿ ಕಾಲೇಜು 28 ಕೊಠಡಿಗಳ ಸ್ವಂತ ಕಟ್ಟಡ ಹೊಂದಿರುತ್ತದೆ.

ಉ) ಖಾಲಿ ಇರುವ ಹುದ್ದೆಗಳು:

ಬೋಧಕರು	ಬೋಧಕೇತರರು	
1) ಪ್ರಾಂಶುಪಾಲರು–1	1) ಮ್ಯಾನೇಜರ್	–1
	2) ಅಟೆಂಡರ್	–2
	3) ಪರಿಚಾರಕರು	–1

ಸರ್ಕಾರಿ ಆದೇಶ ಸಂಖ್ಯೆ: ಇಡಿ 266 ಡಿಸಿಇ 2001 ದಿನಾಂಕ: 6–9–2002ರನ್ವಯ ಉಪನ್ಯಾಸಕರುಗಳನ್ನು ಗ್ರೂಪ್– ಬಿ ಶ್ರೇಣಿಗೆ ಸೇರಿದವರೆಂದು ಪರಿಗಣಿಸಿ ಮತ್ತು ಗ್ರೇಡ್ –1 ಪ್ರಾಂಶುಪಾಲರ ಹುದ್ದೆಗಳನ್ನು ಭರ್ತಿ ಮಾಡುವಾಗ ಮೀಸಲಾತಿ ನೀತಿಯನ್ನು ಅನ್ವಯಿಸತಕ್ಕದೆಂದು ಆದೇಶಿಸಲಾಗಿದೆ. ಸದರಿ ಆದೇಶವನ್ನು ಪ್ರಶ್ನಿಸಿ ಶ್ರೀ ಕೆ. ನಾರಾಯಣ, ಅರ್ಥಶಾಸ್ತ್ರ ಉಪನ್ಯಾಸಕರು ಮತ್ತಿತರರು ಕೆಎಟಿ ಯಲ್ಲಿ ಪ್ರಶ್ನಿಸಲಾಗಿದ್ದು, ತತ್ಸಂಬಂಧವಾಗಿ ನ್ಯಾಯ ಮಂಡಳಿಯು ಮಧ್ಯಂತರ ಆದೇಶ ನೀಡಿ ಯಥಾಸ್ಥಿತಿಯನ್ನು ಕಾಯ್ದಿರಿಸಲು ಆದೇಶಿಸಿದೆ. ಇದರಿಂದಾಗಿ ಪ್ರಾಂಶುಪಾಲರು ಗ್ರೇಡ್ – 1 ಖಾಲಿ ಹುದ್ದೆಗಳ ಭರ್ತಿಗೆ ಕ್ರಮ ಜರುಗಿಸಲು ಸಾಧ್ಯವಾಗಿರುವುದಿಲ್ಲ.

ಬಡ್ತಿ ನೀಡುವ ಸಂದರ್ಭದಲ್ಲಿ ಖಾಲಿ ಇರುವ ಮ್ಯಾನೇಜರ್ ಹುದ್ದೆಗಳನ್ನು ತುಂಬಲು ಕ್ರಮ ಕೈಗೊಳ್ಳಲಾಗುತ್ತದೆ. ಸರ್ಕಾರದ ಆರ್ಥಿಕ ಮಿತವ್ಯಯ ಜಾರಿಯಲ್ಲಿರುವುದರಿಂದ, ಆರ್ಥಿಕ ಮಿತವ್ಯಯ ಸಡಿಲಗೊಳಿಸಿದ ನಂತರ ಅಟೆಂಡರ್ ಮತ್ತು ಪರಿಚಾಲಕರ ಖಾಲಿ ಹುದ್ದೆಗಳನ್ನು ಅವಶ್ಯಕತೆಗೆ ಅನುಗುಣವಾಗಿ ತುಂಬಲು ಕ್ರಮ ಜರುಗಿಸಲಾಗುತ್ತದೆ.

5041(5966) ಶ್ರೀ. ಮಲ್ಲಿಕಾರ್ಜುನ್ ಸಿದ್ರಾಮಪ್ಪ ಖೂಬಾ(ಬಸವಕಲ್ಯಾಣ) :– ಮಾನ್ಯ ಗ್ರಾಮೀಣ ನೀರು ಸರಬರಾಜು, ನೈರ್ಮಲ್ಯ ಮತ್ತು ಪಂಚಾಯತ್ ರಾಜ್ ಇಂಜಿನಿಯರಿಂಗ್ ರಾಜ್ಯ ಸಚಿವರು. ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಬೀದರ್ ಜಿಲ್ಲೆಯಲ್ಲಿ 2004–05ನೇ ಸಾಲಿನಲ್ಲಿ ಬರಪರಿಹಾರ ಕಾಮಗಾರಿ ಯೋಜನೆಯಡಿಯಲ್ಲಿ ಕುಡಿಯುವ ನೀರಿನ ವ್ಯವಸ್ಥೆಗಾಗಿ ಕೈಗೊಂಡ ಒಟ್ಟು ಕಾಮಗಾರಿಗಳು ಎಷ್ಟು, ಅವುಗಳಿಗೆ ನಿಗದಿಗೊಳಿಸಲಾದ ಅಂದಾಜು ಅನುದಾನದ ಮೊತ್ತ ಎಷ್ಟು: (ತಾಲ್ಲೂಕುವಾರು ಮಾಹಿತಿ ನೀಡುವುದು):

ಆ) ಕುಡಿಯುವ ನೀರಿನ ಕುರಿತಾದ ಸಮಸ್ಯೆಗಳನ್ನು ಯೋಜನೆಯ ಮೂಲಕ ಪರಿಹರಿಸಲಾಗಿದೆಯೇ, ಇಲ್ಲವಾದಲ್ಲಿ ಕಾರಣಗಳೇನು, ಕಾಮಗಾರಿಗಳ ಗುತ್ತಿಗೆದಾರರಿಗೆ ಸಕಾಲದಲ್ಲಿ ಹಣ ಪಾವತಿಯ ವ್ಯವಸ್ಥೆಯಲ್ಲಿ ಲೋಪ ದೋಷಗಳು ಕಂಡು ಬಂದಿದೆಯೇ:

ಇ) ಈ ಕಾಮಗಾರಿಗಳ ಕುರಿತಾದ ಬಾಕಿ ಹಣ ಪಾವತಿಯ ಮೊತ್ತ ಎಷ್ಟು, ಅವುಗಳನ್ನು ಯಾವಾಗ ಬಿಡುಗಡೆ ಮಾಡಲು ಸರಕಾರ ಕ್ರಮ ಕೈಗೊಳ್ಳುವುದು?